ತುಂಡು ಭೂಮಿ ನಿರೋಧ ಮತ್ತು ಕ್ರೋಡೀಕರಣ

೧೬೪೦. ಶ್ರೀ ಡಿ. ಎ. ಚಿನ್ನಪ್ಪ (ವಂಡಕೇರಿ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕರ್ನಾಟಕ ತುಂಡು ಭೂಮಿ ನಿರೋಧ ಮತ್ತು ಕ್ರೋಡೀಕರಣ ಕಾಯ್ದೆಯಿಂದ ವಿನಾಯಿತಿ ಪಡೆದಿದೆಯೇ?

ಆ) ಹಾಗಿದ್ದಲ್ಲಿ ಕೊಡಗು ಜಿಲ್ಲೆಯು ಮಲೆನಾಡು ಪ್ರದೇಶದಲ್ಲಿಯಿರುವುದರಿಂದ ಆ ಜಿಲ್ಲೆಗೆ ಅದೇ ರೀತಿ ವಿನಾಯಿತಿ ಕೊಡದಿರಲು ಕಾರಣವೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—

ಅ) ಹೌದು.

ಆ) ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭೂ ಹಿಡುವಳಿಗಳು ಕರ್ನಾಟಕ ತುಂಡು ಭೂಮಿ ನಿಷೇದ ಮತ್ತು ಕ್ರೋಡೀಕರಣ ಕಾಯಿದೆಯಲ್ಲಿ ಆಳವಡಿಸಿರುವ ನಿರ್ದಿಷ್ಟ ಪ್ರಮಾಣದ ಭೂಮಿಗಿಂತಲೂ ಚಿಕ್ಕದಾಗಿರುವುದರಿಂದಲೂ ಮತ್ತು ಆ ಜಿಲ್ಲೆಗಳ ಒಂದು ವಿಶೇಷ ರೀತಿಯ ಭೌಗೋಳಿಕ ಪ್ರಾಕೃತಿಕ ಸ್ವರೂಪವನ್ನು ಪರಿಗಣಿಸಿ ಈ ಅಧಿನಿಯಮದ ೨ನೇ ಅಧ್ಯಾಯವನ್ನು ಈ ಜಿಲ್ಲೆಗಳಿಗೆ ಅನ್ವಯಿಸದೆ ಇರುವಂತೆ ಆದೇಶ ಹೊರಡಿಸಲಾಗಿದೆ. ಆದರೆ ಇಂಥಹ ಪರಿಸ್ಥಿತಿಯು ಕೊಡಗು ಜಿಲ್ಲೆಗೆ ಉದ್ಭವಿಸುವುದಿಲ್ಲ, ಆದರೂ ಇಂಥಹ ವಿನಾಯಿತಿಯನ್ನು ರಾಜ್ಯದ ಉಳಿದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ತಜ್ಞರಿಂದ ವರದಿ ಬಂದ ನಂತರ ಪರಿಶೀಲಿಸಿ, ಕರ್ನಾಟಕ ತುಂಡು ಭೂಮಿ ನಿಷೇದ ಮತ್ತು ಕ್ರೋಡೀಕರಣ ಅಧಿನಿಯಮವನ್ನು ಉದ್ದೇಶ ಪೂರ್ವಕವಾಗಿ ಜಾರಿಗೆ ತರುವ ಮೂಲಕ ನಿರ್ದಿಷ್ಟ ಪ್ರಮಾಣದ ಭೂ ಹಿಡುವಳಿಯನ್ನು ಪುನರ್ ನಿಗದಿ ಪಡಿಸಲಾಗುವುದು.

ಕಡೂರು ತಾಲ್ಲೂಕಿನ ಎಷ್ಟು ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ

೧೬೭೪. ಶ್ರೀ ಓಂಕಾರಮೂರ್ತಿ (ಕಡೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನ ಎಷ್ಟು ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗಿದೆ ಹಾಗೂ ಹಣ ದುರುಪಯೋಗ ಪಡಿಸಿಕೊಂಡ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು?

ಆ) ಹಣ ದುರುಪಯೋಗವಾಗಿರುವ ಸಂಘಗಳ ಹಾಗೂ ದುರುಪಯೋಗಪಡಿಸಿಕೊಂಡಿರುವರುವ ಹೆಸರುಗಳೇನು?

ಇ) ಅವರುಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಈ) ಕೆಲವು ಕಾರ್ಯದರ್ಶಿಗಳು ೨-೩ ಸಹಕಾರ ಸಂಘಗಳ ಹಣ ದುರುಪಯೋಗ ಮಾಡಿದ್ದರೂ ಅವರನ್ನು ಮುಂದುವರಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು) —

ಅ) ಕಡೂರು ತಾಲ್ಲೂಕಿನ ೧೫ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ನಡೆದಿದ್ದು ೨೦ ಜನ ಕಾರ್ಯದರ್ಶಿಗಳು ಹಣ ದುರುಪಯೋಗ ಪ್ರಕರಣದಲ್ಲಿ ತೊಡಗಿರುತ್ತಾರೆ.

ಆ) ಹಣ ದುರುಪಯೋಗವಾಗಿರುವ ಸಹಕಾರ ಸಂಘಗಳ ಹೆಸರು ಮತ್ತು ಆ ಕಾರ್ಯದರ್ಶಿಗಳ ಹೆಸರನ್ನು ತೋರಿಸುವ ತಃಖ್ತೆಯನ್ನು ಇದರೊಂದಿಗೆ ಲಗತ್ತಿಸಿದೆ.

ಇ) ಕಾರ್ಯದರ್ಶಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ತಃಖ್ತೆಯಲ್ಲಿ ನಮೂದಿಸಲಾಗಿದೆ.

ಈ) ಹೌದು.